ಲೋಕದ ಸ್ವಾಮಿ, ನನ್ನನ್ನು ಪೂಜೆ ಮಾಡಿ ಎಂದು ದೇವತೆಗಳಿಗೆ ಅಪ್ಪಣೆ ಮಾಡುತ್ತಾನೆ. ಎಲ್ಲ ದೇವತೆಗಳು ಅಸಹಾಯಕರಾಗಿ ಬ್ರಹ್ಮ, ವಿಷ್ಣು, ಮಹೇಶ್ವರರ ಬಳಿ ಬಂದು ಗಜಮುಖ ರಾಕ್ಷಸನಿಂದ ಆದ ಉಪದ್ರವಗಳನ್ನು ಆತಂಕದಿಂದ ಹೇಳಿಕೊಳ್ಳುತ್ತಾರೆ. ಆಗ ಶಿವನು ಅಲ್ಲೇ ಇದ್ದ ಗಣೇಶನಿಗೆ, ನೀನು ಆ ದೈತ್ಯನಿಗೆ ಬುದ್ಧಿ ಕಲಿಸು ಎಂದು ಕಳುಹಿಸಿಕೊಡುತ್ತಾನೆ. ಗಣೇಶನು ಮೊದಲಿಗೆ ಅಸುರ ಗಜಮುಖನಿಗೆ ಬುದ್ಧಿ ಹೇಳಲು ಮುಂದಾಗುತ್ತಾನೆ. ಆದರೆ ಗಣೇಶನ ಮಾತನ್ನು ಕಿವಿಗೆ ಹಾಕಿಕೊಳ್ಳದೆ ಗಜಮುಖ ರಾಕ್ಷಸ ಯುದ್ಧ ಮಾಡುತ್ತಾನೆ. ಯುದ್ಧದಲ್ಲಿ ಸೋತ ಗಜಮುಖನು ತನ್ನ ರೂಪವನ್ನು ಬದಲಿಸಿ ಮೂಷಿಕ ಅವತಾರ ತಾಳಿ ಗಣೇಶನ ಮೇಲೆ ಆಕ್ರಮಣ ಮಾಡಲು ಮುಂದಾಗುತ್ತಾನೆ. ಆಗ ಗಣೇಶ ಆ ಮೂಷಿಕನ ಮೇಲೆ ಹತ್ತಿ ಕುಳಿತುಕೊಳ್ಳುತ್ತಾನೆ. ಮೂಷಿಕನಿಗೆ ಗಣೇಶನಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ. ಗಣೇಶನು ಮೂಷಿಕನನ್ನು ತನ್ನ ವಾಹನವನ್ನಾಗಿ ಮಾಡಿಕೊಳ್ಳುತ್ತಾನೆ. ಕೊನೆಗೆ ಮೂಷಿಕ ಗಣೇಶನ ಮಿತ್ರನಾಗುತ್ತಾನೆ. ಈ ಕಥೆ ಹೆಚ್ಚು ಜನಜನಿತವಾಗಿದೆ ಗೊತ್ತಾ' ಎಂದಳು.



'ಪರವಾಗಿಲ್ಲ ಕಣೆ, ಎಷ್ಟೊಂದು ತಿಳಿದುಕೊಂಡು ಬಿಟ್ಟಿದ್ದೀಯ' ಎಂದು ರಮಾನಾಥ ಹೆಂಡತಿಗೆ ಶಹಬಾಸ್‌ಗಿರಿ ಕೊಟ್ಟ.

'ಹೂಂ, ಗಣೇಶ ಹಬ್ಬದ ಸಮಯದಲ್ಲಿ ನಮ್ಮ ರಸ್ತೆಯವರಿಗೆಂದು ಮಾಡಿದ್ದ 'ಗಣೇಶ ಹಬ್ಬದ ಸಂಘ' ವಾಟ್ಸ್ಆ್ಯಪ್ ಗ್ರೂಪ್‌ನಲ್ಲಿ ಯಾರೋ ಇದಕ್ಕೆ ಸಂಬಂಧಪಟ್ಟ ವಿಡಿಯೊ ಶೇರ್ ಮಾಡಿದ್ದನ್ನು ನೋಡಿದ್ದೆ. ಎಷ್ಟು ಚೆನ್ನಾಗಿ ಅದನ್ನು ಜ್ಞಾಪಕ ಇಟ್ಟುಕೊಂಡು ನಿಮಗೆ ಹೇಳ್ತಾ ಇದೀನಿ, ನೀವು ಹೇಳಿದ ಹಾಗೆ ನಾನು ನಿಜವಾಗಲೂ ಪಿ.ಎಚ್‌ಡಿ. ಮಾಡಬಹುದು ಅಲ್ವೇನ್ರೀ' ಎಂದಳು.

'ಹೂಂ ಖಂಡಿತವಾಗಿಯೂ ಮಾಡಬಹುದು! ಈಗ ಎಲ್ಲರೂ ವಾಟ್ಸ್ಆ್ಯಪ್, ಸೋಷಿಯಲ್ ಮೀಡಿಯಾ ವಿಶ್ವವಿದ್ಯಾಲಯದ ಸ್ಕಾಲರ್‌ಗಳೇ, ಯಾರಿಗೂ ಏನೂ ಗೊತ್ತಿಲ್ಲ ಅನ್ನುವ ವಿಚಾರವೇ ಇಲ್ಲ ನೋಡು' ಎಂದು ಗಂಭೀರವಾಗಿ ಹೇಳಿದ.

ಅದರಿಂದ ಮತ್ತಷ್ಟು ಹುರುಪುಗೊಂಡ ಶ್ರೀಮತಿ, 'ರೀ, ಈ ವಿಷಯ ಕೇಳಿದರೆ ನಿಮಗೆ ಇನ್ನೂ ಆಶ್ಚರ್ಯ ಆಗುತ್ತೆ, ರಾಜಾಸ್ಥಾನದಲ್ಲಿ ಇಲಿಗಳ ದೇವಸ್ಥಾನ ಇದೆಯಂತೆ ನಿಮಗೆ ಗೊತ್ತಾ' ಎಂದು ಕೇಳಿದಳು. ಅದಕ್ಕೆ ರಮಾನಾಥ, 'ವಿಶ್ವದಲ್ಲಿರುವ ಎಲ್ಲವನ್ನೂ ತಿಳಿದಿರಲು ನಾನೇನೂ ಸೃಷ್ಟಿಕರ್ತ ಬ್ರಹ್ಮನಲ್ಲ, ನಿನ್ನ ಥರ ಅದೂ ಇದೂ ಕೇಳ್ಕೊಂಡು, ನೋಡ್ಕೊಂಡು ತಿಳಿದುಕೊಳ್ಳುವಷ್ಟು ಸಮಯ ನನಗಿಲ್ಲಮ್ಮ' ಎಂದು ಉದ್ಗಾರ ತೆಗೆದ.

'ಸರಿ ಬಿಡಿ ಅದಕ್ಕೇನಂತೆ, ನನ್ನ ಗೆಳತಿ ರಮ್ಯಾಳ ಕುಟುಂಬದವರೆಲ್ಲ ಉತ್ತರ ಭಾರತದ ಪ್ರವಾಸ ಹೋಗಿದ್ದಾಗ ರಾಜಾಸ್ಥಾನದ ಸಮೀಪ 'ಕರಣಿಮಾತಾ ಮಂದಿರ'ಕ್ಕೆ ಹೋಗಿದ್ದರಂತೆ. ಅಲ್ಲಿ ಇಲಿಗಳನ್ನು ಪೂಜಿಸುತ್ತಾರಂತೆ. ಅವಳು ಹೇಳಿದ್ದನ್ನು ಕೇಳಿ ನನಗೆ ತುಂಬಾ ಆಶ್ಚರ್ಯವಾಯಿತು ಗೊತ್ತಾ! ಇಲಿಗಳು ದೇವಸ್ಥಾನದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಓಡಾಡುತ್ತಿರುತ್ತವೆ ಹಾಗೂ ಅವುಗಳಿಂದ ಅಲ್ಲಿಗೆ ಬರುವ ಭಕ್ತರಿಗೆ ಯಾವುದೇ ಅಪಾಯವಿಲ್ಲವೆಂದು ಹೇಳುತ್ತಾರೆ, ಆದರೆ ನನಗಂತೂ ತುಂಬಾ ಭಯವಾಯಿತು ಅಂತ ರಮ್ಯಾ ಹೇಳಿದಳು' ಎಂದು ಪತಿ ರಮಾನಾಥನಿಗೆ ವರದಿ ಒಪ್ಪಿಸಿದಳು ಶ್ರೀಮತಿ.

'ಸರಿ, ಅದೆಲ್ಲ ಹಾಗಿರಲಿ, ನಾಳೆ ಆ ಇಲಿ ಮತ್ತೆ ಕಾಣಿಸಿದರೆ ಪಕ್ಕದ ಮನೆಯವರು ಸಾಕಿಕೊಂಡಿರುವ ಬೆಕ್ಕನ್ನು ಸ್ವಲ್ಪಹೊತ್ತು ನಮ್ಮ ಮನೆಗೆ ಬಾಡಿಗೆಗೆ ತೆಗೆದುಕೊಳ್ಳೋಣವಾ? ಯಾಕೆ ಅಂದ್ರೆ ಸುಮ್ಮನೆ ಕೇಳಿದರೆ ಕೊಡುತ್ತಾರೋ ಇಲ್ಲವೋ' ಎಂದು ರಮಾನಾಥ ಹೇಳುತ್ತಿದ್ದಂತೆ, 'ರೀ, ನಾನೇನು ಈ ಮನೇಲಿ ಇರಬೇಕೋ ಬೇಡವೋ, ಮೊದಲೇ ನನಗೆ ಬೆಕ್ಕು ಅಂದರೆ ಭಯ ಅಂತ ನಿಮಗೆ ಗೊತ್ತಿಲ್ವಾ' ಎಂದು ಗಂಡನನ್ನು ಜೋರಾಗಿ ಕೇಳಿದಳು ಶ್ರೀಮತಿ.

'ನನಗೆ ಗೊತ್ತಿಲ್ವೇನೇ, ನೀನು ಹೊಸದಾಗಿ ಹೇಳಬೇಕಾ ಅದನ್ನ. ಬೆಳಗ್ಗೆ ಸ್ವಲ್ಪ ಹೊತ್ತು ನೀನು ಮಹಡಿಯ ರೂಮಿನಲ್ಲೇ ಬಾಗಿಲು ಹಾಕಿಕೊಂಡಿರು, ಕೆಳಗೆ ಬರಲೇ ಬೇಡ ಆ ಬೆಕ್ಕು ಬಂದಾಗ' ಎಂದು ಹೇಳಿದ. 'ಹೂಂ, ಆದರೆ ಒಂದು ಸಲ ಅದು ಮನೆ ನೋಡಿಕೊಂಡರೆ ತುಂಬಾ ಕಷ್ಟಾರೀ' ಎಂದು ಆತಂಕ ಹೊರಹಾಕಿದಳು ಶ್ರೀಮತಿ. 'ಹಾಗೆಲ್ಲ ಏನೂ ಆಗಲ್ಲ, ಹೆದರಬೇಡ' ಎಂದು ಹೆಂಡತಿಗೆ ಧೈರ್ಯ ಹೇಳಿದ ರಮಾನಾಥ.

ಶ್ರೀಮತಿಗೆ ತಾನು ಕೇಳಿದ್ದ 'ಸನ್ಯಾಸಿ ಮತ್ತು ಬೆಕ್ಕು' ಕಥೆ ನೆನಪಾಯಿತು. ಸನ್ಯಾಸಿಯೊಬ್ಬ ಧ್ಯಾನ ಮಾಡಲು ಕಾಡಿಗೆ ಹೋಗಿ ಅಲ್ಲಿ ಒಂದು ಕುಟೀರ ನಿರ್ಮಿಸಿದ. ಅವನು ಧ್ಯಾನಸ್ಥನಾಗಿದ್ದಾಗ ಕುಟೀರದೊಳಗೆ ನುಗ್ಗಿದ ಇಲಿಯೊಂದು ಅವನ ಕಾವಿ ವಸ್ತ್ರಗಳನ್ನು ಕಚ್ಚಿಹಾಕುತ್ತಿತ್ತು. ಆಗ ಸನ್ಯಾಸಿ ತನ್ನ ಶಿಷ್ಯರಿಗೆ ಹೇಳಿ ಇಲಿ ಹಿಡಿಯಲು ಬೆಕ್ಕೊಂದನ್ನು ತರಿಸಿದ. ಭಕ್ತನೊಬ್ಬ ಹಾಲು ಹಾಕಿ ಬೆಕ್ಕನ್ನು ಸಾಕಲು ಸನ್ಯಾಸಿಗೆ ಹಸುವನ್ನು ದಾನ ನೀಡಿದ. ಸನ್ಯಾಸಿಗೆ ಬೆಕ್ಕು ಮತ್ತು ಹಸುವನ್ನು ನೋಡಿಕೊಳ್ಳುತ್ತ ಧ್ಯಾನ ಮಾಡಲು ಸಮಯವೇ ಸಿಗುತ್ತಿರಲಿಲ್ಲ. ಹೀಗಾಗಿ ಅವುಗಳನ್ನು ನೋಡಿಕೊಳ್ಳಲು ಮನೆಯಲ್ಲಿ ಒಂದು ಹೆಣ್ಣು ಇದ್ದರೆ ಒಳ್ಳೆಯದು ಎಂದು ಮದುವೆ ಮಾಡಿಕೊಂಡ. ಹೀಗೆ ಸನ್ಯಾಸಿ ಸಂಸಾರಿಯಾದ.

ಕಥೆಯ ನೆನಪಿನಲ್ಲೇ 'ರೀ... ರೀ...' ಎಂಬ ಶ್ರೀಮತಿಯ ರಾಗ ಕೇಳಿ ರಮಾನಾಥ, 'ಇನ್ನೇನಾದರೂ ವಿಷಯಗಳಿವೆಯೇ ಡಾ. ಶ್ರೀಮತಿಯವರೇ' ಎಂದು ಛೇಡಿಸುತ್ತ ಕೇಳಿದ.

'ಅದೂ... ಹೂಂ... ಮುಂಬಯಿ ಮಹಾನಗರದ ಮಾಟುಂಗಾ ಪ್ರದೇಶದ ರಸ್ತೆ ಬದಿಯಲ್ಲಿ ವ್ಯಕ್ತಿಯೊಬ್ಬ 'ಇಲಿ ಜ್ಯೋತಿಷ್ಯ' ಹೇಳುತ್ತಾನಂತೆ.

'ಏನು ಇಲಿ ಜ್ಯೋತಿಷ್ಯಾನಾ?'

'ಹೌದು ರೀ... ಅದಕ್ಕೇ ನಾವೂ...' ಎಂದು ರಾಗ ತೆಗೆದಳು ಶ್ರೀಮತಿ.

'ಹೂಂ... ನಾವೂ... ಏನು?' ಎಂದು ರಮಾನಾಥ ಕೇಳಿದ.

'ನಾವು ಕೂಡ ನಮ್ಮ ಮನೆಯಲ್ಲಿರುವ ಇಲಿಯನ್ನು ಪಳಗಿಸಿ ಜ್ಯೋತಿಷ್ಯ ಹೇಳಿದರೆ ಹೇಗೆ?' ಮೆಲ್ಲಗೆ ಕೇಳಿದಳು ಶ್ರೀಮತಿ.

'ನೀನು ಡಾಕ್ಟರ್ ಶ್ರೀಮತಿಯಲ್ಲ ಕಣೇ, ನನ್ನ ತಲೆ ತಿನ್ನೋಕೆ ಹುಟ್ಟಿರೋ ಮೆಂಟಲ್ ಶ್ರೀಮತಿ' ಎನ್ನುತ್ತ ರಮಾನಾಥ ತಲೆ ತಿರುಗಿ ಬಿದ್ದ! ಶ್ರೀಮತಿ 'ಆಪರೇಷನ್ ಮೂಷಿಕ'ದ ಉತ್ಸಾಹದಲ್ಲಿ ತೇಲಾಡುತ್ತಿದ್ದಳು!

ಪ್ರತಿಕ್ರಿಯಿಸಿ: **feedback@sudha.co.in**